UNIVERSAL
LIBRARY
OU_198532
UNIVERSAL
LIBRARY

॥ ಶ್ರೀಃ ॥

ಶ್ರೀಮನ್ಮಧ್ವಸಿದ್ಧಾಂತಗ್ರಂಥಾಲಯ,

ಉಡುಪಿ.

# ಯದು, ಚಂದ್ರ, ಸೂರ್ಯ

# ವಂಶಾವಳಿ.

ಪ್ರಥಮಮುದ್ರಣ ೧೦೦೦.

ಶ್ರೀಕೃಷ್ಣಮುದ್ರಣಾಲಯ, ಉಡುಪಿ.

1929.

ಬೆಲೆ: ೦—೨—೦

*(All rights reserved.)*

# ಪ್ರಸ್ತಾವನೆ.

ಭಾರತ ಮೊದಲಾದ ಮಹಾ ಪುರಾಣಗಳ ಪಾರಾಯಣದಿಂದ ಪ್ರಾಚೀನ ಕಥಾ ಭಾಗಗಳು ಚಿತ್ತದಲ್ಲರಗೊಡಿಸುವರೆ ಅನಾನುಕೂಲ. ಪ್ರಾಚೀನ ಕಾಲದ ರಾಜವಂಶಸ್ಥರ ನಾಮಾಂಕಿತಗಳು ನೆನಪಿನಲ್ಲಿ ಇಡುವದು ಅಶಕ್ಯವಾದ್ದರಿಂದ ಅಭಿಮತಗಳು ಭಿನ್ನಭಿನ್ನವಾದ್ದರಿಂದ ಕಷ್ಟಗಳು ಎಂತ ಗ್ರಹಿಸಿಕೊಂಡು ಈ ವಂಶಾವಳಿಯನ್ನು ಬರದ್ದಾಗಿರುತ್ತದೆ. ಇದರಲ್ಲ ಕಂಡುಬರುವ ಕುಂದುಗಳೆಲ್ಲ ಬಲ್ಲವರು ನೋಡಿ ತಿದ್ದಿಕೊಳ್ಳಬೇಕಾಗಿ ಸಾದರದಿಂದ ಪ್ರಾರ್ಥಿಸುವ,

**ಮುಂಡಾಜೆ ಅನಂತಭಟ್ಟ, ಗೋರೆ.**

॥ ಶ್ರೀಃ ॥

॥ ಶ್ರೀಗಣೇಶಾಯ ನಮಃ ॥

# (ಯಾದವರು)

# ಯದುವಂಶಾವಳಿ.

ನಂಬ್ರ ೧ನೇ ಲಕ್ಷ್ಮೀನಾರಾಯಣಸ್ವಾಮಿ. ಇವರ ನಾಭಿಕಮಲೋದ್ಭವ ಬ್ರಹ್ಮ. ಇವರಿಂದ ಮರೀಚಿ ಅತ್ರಿಕೂಡಾ ೧೦ ಜನ ಮಾನಸಪುತ್ರರು. ಸಂಬ್ರ ೩ ಇವರಲ್ಲಿ ಎರಡನೆ ಅತ್ರಿಯಿಂದ ನಂಬ್ರ ೪ನೆ ಚಂದ್ರ. ಇವರಿಂದ ಸಂಬ್ರ ೫ನೆ ಬುಧ. ನಂಬ್ರ ೬ನೆ ಪುರೂರವ. ಇವರಿಂದ ನಂಬ್ರ ೭ನೆ ಆಯು. ಕೂಡಾ ೮ಜನರು. ಒಂದನೆ ಆಯುವಿನಿಂದ ೮ನೆ ನಹುಷ ಕೂಡಾ ೫ ಜನರು. ನಂಬ್ರ ೮ನೆ ನಹುಷರಾಜರಿಂದ ನಂಬ್ರ ೯ ಯಯಾತಿ ಕೂಡಾ ೭ ಜನರು. ಪೈಕಿ ೧ನೆ ಯಯಾತಿಯಿಂದ ನಂಬ್ರ ೧೦ನೆ ಯದು. ತುರ್ವಸು. ದ್ರುಹ್ಯುಲ. ಅನು. ಪುರೂರವ. ಹೀಗೆ ೫ ಜನರಲ್ಲಿ ೫ನೆ ಪುರೂರವರಾಜ. ಚಂದ್ರವಂಶಕ್ಕೆ ಮೂಲಪುರುಷ. ೧೦ನೆ ಯದುರಾಜರಿಂದ ಸಹಸ್ರಜಿತು. ಕ್ರೌಸ್ಟಕೂಡಾ ೫ಜನರು. ೧೧ನೆ ಈ ಕ್ರೌಸ್ಟರಾಜರಿಂದ ನಂಬ್ರ ೧೨ನೆ ಪ್ರಜಿನಿವಾನ್. ಇವರಿಂದ ೧೩ನೆ ಸ್ವಾಹಸ. ಇವರಿಂದ ೧೪ನೆ ರುಷುಂಗು. ೧೫ನೆ ಚಿತ್ರರಥ. ನಂಬ್ರ ೧೭ನೆ ಶತಿಬಿಂದು. ಇವರಿಂದ ಪೃಥು ಕೂಡಾ ೧೦೦ಜನರು. ಪೈಕಿ ಸಂಬ್ರ ೧೮ನೆ ಪೃಥುವಿನಿಂದ ಪ್ರತಿಶ್ರವ ಕೂಡಾ ೬ ಜನರು ಇವರಲ್ಲಿ ಒಂದನೆ ನಂಬ್ರ ೧೮ನೆ ಪ್ರತಿಶ್ರವರಾಜರಿಂದ ನಂಬ್ರ ೧೯ನೆ ಸುಯಜ್ಞ ಇವರಿಂದ ನಂಬ್ರ ೨೦ನೆ ಉಶನ. ನಂಬ್ರ ೨೧ನೆ ತಿತಿಕ್ಷ. ಇವರಿಂದ ನಂಬ್ರ ೨೨ನೆ ಮರುತರಾಜ. ೨೩ನೆ ಕಂಬಲ. ೨೪ನೆ ರುಕ್ಮಕವಚ. ಇವರಿಂದ ರುಕುಮೇಯು. ಪ್ರತು ರುಕ್ಮ ಜ್ಯಾಮಘ. ಪರೀಘ. ಹರಿ ಕೂಡ ೫ಜನರು. ಪಂದೇರಾಜ್ಯಕ್ಕೆ ಅರಸರಾದರಿಂದ ಪಾಂಚಾಲದೇಶವೆಂಬ ಹೆಸರು. ಪೈಕಿ ೩ನೆ ಜ್ಯಾಮಘರಾಜರಿಂದ ನಂಬ್ರ ೨೬ನೆ ವಿದರ್ಭ ಇವರಿಂದ ನಂಬ್ರ ೨೭ನೆ ಕೃತು. ಕೂಡಾ ೩ ಜನರು.

ಪೈಕಿ ವಂದನೆಯುವರಿಂದ ನಂಬ್ರ ೨೮ನೆ ಕುಂತಿ. ೨೯ನೆ ದೃಷ್ಟಸೇನ. ನಂಬ್ರ ೩೦ನೆ ನಿರ್ವೃತಿ. ೩೧ನೆ ವಿದುರಥ. ೩೨ನೆ ದಶಾರ್ಹ. ೩೩ನೆ ವ್ಯೋಮ. ೩೪ನೆ ಜೀಮೂತ. ಸಂಬ್ರ ೩೫ನೆ ವಿಮಲ. ಸಂಬ್ರ ೩೬ನೆ ಭೀಮರಥ. ೩೭ನೆ ನವರಥ. ೩೮ ದೃಢರಥ. ನಬ್ರ ೩೯ನೆ ಶಕುನಿ. ೪೦ನೆ ಕರಂಭ. ೪೧ನೆ ದೇವರಾತ. ೪೨ನೆ ದೇವನಕ್ಷತ್ರ. ೪೩ನೆ ಮಧುರಾಜ. ೪೪ನೆ ಪುರವನ ೪೫ನೆ ಪುರದ್ವಾನ್. ೪೬ನೆ ಜಂತು. ಇವರಿಂದ ೪೭ನೆ ಸತ್ವರಾಜರು. ಕೌಸಲ್ಯಾಸ್ತ್ರೀಯಿಂದ ೪೮ನೆ ವಿಶ್ವರಾಜ. ೪೯ಪ್ರಸೇನ. ೫೦ನೆ ಶಕ್ತಿರೂತ. ೫೧ನೆ ಶಸಿ. ೫೨ನೆ ಯುರಾಜಿತ. ೫೩ನೆ ವೃಷಭಕೂಡಾ ೫ಜನರು. ಪೈಕಿ ವಂದನೇಯುವರಿಂದ ನಂಬ್ರ ೫೪ನೆ ಜಯಂತ. ಇವರಿಂದ ೫೫ನೆ ಅಕ್ರೂರ. ಇವರಿಗೆ ರತ್ನಶಿರಿ. ಉಗ್ರಸೇನಿ. ಅಶ್ವಿನಿ. ಕೂಡಾ ೩ಸ್ತ್ರೀಯರು. ೧ನೆಯುವಳಿಂದ ಶತ್ರುಘ್ನ ಕೂಡಾ ೧೧ ಮಕ್ಕಳು. ೨ನೆಯುವಳಿಗೆ ದೇವಕ ಕೂಡಾ ೨ ಮಕ್ಕಳು. ೩ನೆಯುವಳಿಗೆ ಗವೇಷಣ ಕೂಡಾ ೧೩ ಮಕ್ಕಳು. ಈ ರೀತಿಯಲ್ಲಿ ಅಕ್ರೂರವಂಶ.

ಮೇಲೆ ಹೇಳಿದ ನಂಬ್ರ ೪೭ನೆ ಸತ್ವರಾಜರಿಂದ ಭಜ ಭಜಮಾನ್ ಕೂಡಾ ೪ಜನ ಮಕ್ಕಳು. ಇವರಲ್ಲಿ ಎರಡನೆಯುವರು. ನಂಬ್ರ ೫೬ನೆ ಭಜಮಾನ ಇವರಿಂದ ನಂಬ್ರ ೫೭ನೆ ಸಿಮಿ. ಕೃಮಿಲ ವೃಷ್ಣೀ ಪೃಥುರಾಜ ಕೂಡಾ ೪ ಜನರಲ್ಲಿ ೨ನೆಯುವರಿಂದಲು ೪ನೆಯುವರಿಂದಲು ಕೂಡಾ ಮುಂದೆ ೬೭೦ ರಾಜರು ಮುಕ್ತಿಯನ್ನೈದಿದರು.

ನಂತ್ರ ಪುರೋಹಿತ ದೇವಾಯರ್ನೆಂಬ ಬ್ರಾಹ್ಮಣನಿಂದ ವಂಶ ವೃದ್ಧಿಯಂತೆ ತೋರುತ್ತದೆ. ಇಲ್ಲಿಂದ ಮುಂದೆ ಹಿಂದಿನ ನಂಬ್ರ ೫೮ನೆ ಕುಕ್ಕುರರಾಜ. ನಂಬ್ರ ೫೯ನೆ ಭಜವಮಾನ. ೬೦ನೆ ಶತಿ. ಸಂಬ್ರ ೬೧ನೆ ಕಂಬಲ ಬರ್ಹಿಷ. ನಂಬ್ರ ೫೯ನೆ ಭಜಮಾನರಿಂದ ಸಂಬ್ರ ೬೨ನೆ ವಿದುರಥ. ಇವರಿಂದ ನಂಬ್ರ ೬೩ ರಾಜದೇವ. ಇವರೀಗೆ ಶೋಣಾಶ್ವ. ಕೂಡಾ ೨ ಜನ ಮಕ್ಕಳು. ನಂಬ್ರ ೬೪ನೆ ಶೋಣಾಶ್ವರಿಂದ ನಂಬ್ರ ೬೫ನೆ ಶಮಿ. ಕೂಡಾ ೫ ಜನರು ಇವರಲ್ಲಿ ೧ನೆಯುವರಲ್ಲಿ ನಂಬ್ರ ೬೬ನೆ ಪ್ರತಿಕ್ಷತ್ರ. ೬೭ನೆ ಭೋಜ. ೬೮ನೆ ಹೃದೀಕರಾಜ. ಇವರೀಗೆ ೬೯ನೆ ಕೃತವರ್ಮ ಕೂಡಾ ೧೦ ಜನ

ಮಕ್ಕಳು. ಇವರಲ್ಲಿ ೩ನೆ ದೇಹಾರ್ಯರಿಂದ ೭೦ ಕಂಬಲಬರ್ಹಿಷ ೭೧ನೆ ಅಸಮಂಜ. ೭೨ನೆ ಭೋಜರಾಜ. ಮತ್ತು ೭ನೆಯವರಿಂದ ೭೩ನೇಅಜಿತ. ೭೪ನೆ ಸುನಾಭಿಕೃಷ್ಣ. ಈ ಮುಂದಿನ ವಂಶಸ್ತರೆಲ್ಲ ಅಂಧಕವಂಶವೆಂತ ಹೇಳಿಯದೆ. ಮೇಲಿನ ನಂಬ್ರ ೭೨ನೆ ಭೋಜರಾಜರಿಂದ ಮುಂದಿನ ಅನೇಕಾನೇಕ ರಾಜವಂಶಸ್ಥರು. ಇವರ ಹೆಸರುಗಳು ವರ್ಣಿಸುವರೆ ಸಮಯ ಸಂಕೋಚವೆಂತ ಪ್ರಾಜ್ಞರೆನ್ನುವರೆಂತ ಕಾಣುತ್ತದೆ.

ಮೇಲಿನ ದೇವಾರ್ಯರವರಿಂದ ನಂಬ್ರ ೫೮ನೆ ಕುಕ್ಕುರರಾಜರಿಂದ ನಂಬ್ರ ೭೫ನೆ ವೃಷಣಿ. ೭೬ನೆ ದೃತಿ. ೭೭ನೆ ಕಪೋತರೋಮ. ಇವರಿಂದ ನಂಬ್ರ ೭೮ನೆ ತೃತರೀಯರಿಂದ ಕನ್ಯಕ. ೭೯ನೆ ನಳರಾಜ. ಇವರಿಂದ ನಂಬ್ರ ೮೦ನೆ ಪುನರ್ವಸುರಾಜರು ಇವರೀಗೆ ಆಹುಕ ಆಹುಕಿ. ಎಂಬ ಜವಳಿ ಗಂಡು ಹೆಣ್ಣುಮಕ್ಕಳು. ಅವಂತಿ ಕಶ್ಯ ರಾಜರಾಜರು. ಇವರ ಹೆಸರು ಕಾಶ್ಯರು ಇವರೀಗೆ ಜವಳಿ ಆಹುಕಿ ಎಂಬ ಸ್ತ್ರೀಪರಿಣಾಮ. ಇವರಲ್ಲಿ ಹುಟ್ಟಿದ ನಂಬ್ರ ೮೧ನೆ ದೇವಕ. ೮೨ನೆ ಉಗ್ರಸೇನನೆಂಬ ಮಕ್ಕಳಲ್ಲಿ ದೇವಕನೆಂಬ ವರೀಗೆ ದೇವಕಿ, ಶ್ರುತದೇವಿ, ಯಶೋದ, ಶ್ರೀದೇವಿ, ಸತ್ಯದೇವಿ, ಸುಪಾತ್ರಿ, ಯಶ್ಪದಾ, ಕೂಡಾ ೭ ಜನ ಹೆಣ್ಣುಮಕ್ಕಳು. ನಂಬ್ರ ೮೨ನೆ ಉಗ್ರಸೇನ ನೀಗೆ ನಂಬ್ರ ೮೩ನೆ ಕಂಸ, ನ್ಯಗ್ರೋಧ, ಕಂಕ, ಸುತಂತು, ರಾಷ್ಟ್ರ, ಯುಧವಾ, ಸುಮುಷ್ಟ, ಭುಯುಸ, ಶಂಕು, ಕೂಡಾ ೯ ಗಂಡು ಮಕ್ಕಳು. ಕೇಶಾ, ಕಂಸಾವತಿ, ರಾಷ್ಟ್ರಪಾಲಿನಿ, ಕಂಕಮತಿ, ಸುಮತಿ, ದೀರ್ಘಸ್ತ್ರಿನಿ, ಎಂಬ ೫ ಜನ ಹೆಣ್ಣು ಮಕ್ಕಳು. ಕೂಡಾ ೧೪ ಜನರು ಗಂಡುಹೆಣ್ಣು ಕೂಡಾ ಆಗಿರುತ್ತಾರೆ.

ಇಕ್ಷ್ವಾಕುವಂಶದಲ್ಲಿ ಹುಟ್ಟಿದ ಶೂರ ರಾಜರ ಪತ್ನಿಯಾಗಿದ್ದ ಭೋಜಸ್ತ್ರೀಮಕ್ಕಳು ವಸುದೇವ ಸಂಜಯ ಕೂಡಾ ಗಂಡು ಮಕ್ಕಳು. ೧೦ರಲ್ಲಿ ೧ನೇ ವಸುದೇವ ಇವರೀಗೆ ಮೇಲಿನ ನಂಬ್ರ ೮೧ನೇ ದೇವಕರಾಜರ ಪುತ್ರಿಯು ೭ ಜನರು ಪತ್ನಿಯರು. ಇವರ ವಿನಹಕಾಶಿರಾಜನ ಪುತ್ರಿ ಸುಸೀಪೆ. ಪ್ರಥಮಹೆಂಡತಿಯಲ್ಲಿ ಪೌಂಡ್ರಿಕ ವಾಸುದೇವ. ಕೂಡಾ ೩ ಜನ ಮಕ್ಕಳು. ಎರಡನೆ ಲಗ್ನದ ೭ಸ್ತ್ರೀಯರಲ್ಲಿ ೧ನೇ ದೇವಕಿಯಿಂದ ನಂಬ್ರ ೮೫ ಬಲ

ರಾಮ. ೮೯ನೆ ಕೃಷ್ಣದೇವರು ೧ನೆಯವರ ಪತ್ನಿ ರೇವತಿ. ೨ನೆಯವರ ಪತ್ನಿ ೮ ಜನರು. ರುಕ್ಮಿಣಿ, ಸತ್ಯಭಾಮೆ, ಸುಭಾವಾ, ಲಕ್ಷ್ಮಣಾ, ಮಿತ್ರಬಿಂದೆ ಕಾಲಿಂದಿ, ಚಾಂಬವತಿ, ಮಾದ್ರಿ, ಕೂಡಾ ಅಷ್ಟಮಾಸ್ತ್ರೀಯರು. ಇವರಲ್ಲಿ ೧ನೆ ರುಕ್ಮಿಣಿ ಸ್ತ್ರೀಯಿಂದ ಪ್ರದ್ಯುಮ್ನ ಭದ್ರಚಾರು ಕೂಡಾ ೧೩ ಗಂಡು ಮಕ್ಕಳು. ಚಾರುಮತೀಯೆಂಬ ಹೆಣ್ಣು ೧. ೨ನೆ ಸತ್ಯಭಾಮೆಯಿಂದ ಭಾನುರೋಹಿತ. ಕೂಡಾ ೪ ಗಂಡು. ಹೆಣ್ಣುಮಕ್ಕಳು ೪. ೪ನೆ ಲಕ್ಷ್ಮಣೆಯಿಂದ ಮಿತ್ರವಾನ್ ಕೂಡಾ ೨ ಗಂಡು ಮಕ್ಕಳು. ಈ ರೀತಿಯಿಂದ ಕೃಷ್ಣದೇವರ ೧೬ ಸಾವಿರ ಗೋಪಸ್ತ್ರೀಯರಲ್ಲಿ ಕೂಡಾ ಹುಟ್ಟಿದ ಮಕ್ಕಳ ಒಟ್ಟು ಸಂಖ್ಯೆ ೧೮೦ ಸಾವಿರ ಎಂತ ಮತ್ಸ್ಯಪುರಾಣ ವಗೈರೆಯಲ್ಲಿ ತೋರುವದು.

ಸಾರಾಂಶ ಆದಿಅಂತ್ಯ ಪರಿಯಂತರಕ್ಕೂ, ಯಾದವರ ಸಂಖ್ಯೆ ೩ ಕೋಟಿ. ಇವರಿದಂ ಮುಖ್ಯ ಅರಸರು ೬೦ ಸಾವಿರ ಇವರುಗಳೆಲ್ಲರ ಹೆಸರುಗಳು ವಿವರಿಸುವರೆ ಸಮಯವು ವಿಮ್ಮಯಿರುವದೆಂದು ಪ್ರಾಜ್ಞರೆನುವರೆಂದು ಊಹಿಸುತ್ತೇನೆ.

ಇಂತಿವಿನಂತಿ.

# ಯದುವಂಶಾವಳಿಯು

## ಸಂಪೂರ್ಣವು.

॥ ಶ್ರೀಕೃಷ್ಣಾರ್ಪಣಮಸ್ತು ॥

# ಚಂದ್ರವಂಶಾವಳಿ.

ಯದುವಂಶದಲ್ಲಿ ಸಂಬ್ರ ೯ನೆ ಯಯಾತಿಪುತ್ರ ನಂಬ್ರ ೧ನೆ ಪುರೂರವ ರಾಜರು ಇವರಿಂದ ನಂಬ್ರ ೨ನೆ ಜನಮೇಜಯ. ನಂಬ್ರ ೩ನೆ ಪ್ರಚೇತ. ನಂಬ್ರ ೪ ಮನುತ್ಸ. ಸಂಬ್ರ ೫ ಪಿತಾಯುಧ. ನಂಬ್ರ ೬ನೆ ದುಂಧುರ. ನಂಬ್ರ ೭ನೆ ಬಹುವಿಧ. ನಂಬ್ರ ೮ನೆ ಸಂಪತ್ತಿರಾಜ. ನಂಬ್ರ ೯ ರಹಂವರ್ಚ. ನಂಬ್ರ ೧೦ನೆ ಬದ್ರಾಶ್ವ. ಇವರಿಂದ ನಂಬ್ರ ೧೧ನೆ ಅವುಚೇಯು. ಕೂಡಾ ೧೦ ಜನ ಮಕ್ಕಳು. ಪೈಕಿ ೧ನೆಯುವರಲ್ಲಿ ನಂಬ್ರ ೧೨ನೆ ಅಂತಿನರಾಜ. ಇವರೀಗೆ ಸಂಬ್ರ ೧೩ ಅಮೂರ್ತಿ, ತ್ರಿವನ, ದಕ್ಷ, ಕೂಡಾ ೩ ಮಕ್ಕಳು. ಈ ೩ನೆ ದಕ್ಷರಾಜರಿಂದ ನಂಬ್ರ ೧೪ನೆ ದುಶ್ಯಂತ. ಕೂಡಾ ೪ ಜನರು. ಈ ದುಶ್ಯಂತರಾಜರಿಗೆ ಶಾಕುಂತಲಾಸ್ತ್ರೀಯಿಂದ ನಂಬ್ರ ೧೫ನೆ ಭಾರಥಿರಾಜ. ಇವರ ಸಾಕಣೆ ಮಗ ನಂಬ್ರ ೧೬ನೆ ಭಾರದ್ವಾಜರಿಂದ ನಂಬ್ರ ೧೭ನೆ ವಿತಥ. ಇವರಿಂದ ನಂಬ್ರ ೧೮ ಭುಮನ್ಯು. ಇವರಿಗೆ ನಂಬ್ರ ೧೯ ಬ್ರಹತ್ಕ್ಷತ್ರ. ನರ, ಗರ್ಗ, ವೀರಸೇನ, ಕೂಡಾ ೪ ಜನರು. ಪೈಕಿ ೪ನೆಯುವರಾದ ವೀರಸೇನರಿಂದ ನಂಬ್ರ ೨೦ನೆ ನಳ. ೨೧ನೆ ಚಂದ್ರಸೇನ. ಇವರ ತಾಯಿ ದಮಯಂತಿ. ಮೇಲಿನ ನಂಬ್ರ ೨೨ನೆ ಬ್ರಹತ್ಕ್ಷತ್ರ ಇವರಿಂದ ನಂಬ್ರ ೨೩ನೆ ಹಸ್ತಿನರಾಜ ಸಂಕೃತಿ, ಶಿಬಿರ, ಕೂಡಾ ೩ ಜನರು. ನಂಬ್ರ ೨೩ನೆ ಹಸ್ತಿನರಾಜರಿಂದ ದ್ವಿಮಿಟಿ, ಅಜಮಿಟಿ, ಪುರುಮಿಟಿ, ಕೂಡಾ ೩ ಜನರು, ಪೈಕಿ ೨ನೆಯುವರು ನಂಬ್ರ ೨೪ನೆ ಅಜಮಿಟಿರಾಜರಿಗೆ ಧುಲಿನಿ, ನಿಲಿನಿ, ಕೇಶಿನಿ, ಕೂಡಾ ೩ ಸ್ತ್ರೀಯರು ೧ ನೆಧುಲಿನಿ ಸ್ತ್ರೀಯಿಂದ ನಂಬ್ರ ೨೫ನೆ ಬಹರನೂಲಿ. ಇವರಿಂದ ಮುಂದೆ ೨೫ನೆ ತಲಾಂತರದಲ್ಲಿ ಉಗ್ರರಾಯರ ಶಾಪದಿಂದ ನಾಶವಾದರು. ಮತ್ತು ನಂಬ್ರ ೨೫ನೆಯುವರ ಸಹೋದರ ನಂಬ್ರ ೨೬ನೆ ಯಲೀನರ. ಇವರ ವಂಶದಲ್ಲಿ ೧೨ನೆ ತಲಾಂತರದಲ್ಲಿ ಉಗ್ರರಾಜ. ಇವರಿಂದ ಮುಂದೆ ಅನೇಕ ಪ್ರಖ್ಯಾತಿವಂತ ರಾಜರಿರುವರೆಂತ ಕಾಣುತ್ತದೆ. ಮೇಲಿನ ನಂಬ್ರ ೨೪ನೆಯುವರ ೨ನೆ ಸ್ತ್ರೀ ಕೇಶಿನಿಯಿಂದ ೨೭ನೆ ಕಣ್ವನಾಮರಾಜರ ಪುತ್ರ ೨೮ನೆ ಮೇಧಾತಿಥಿ. ಇವರು ಕಣ್ವಮುನಿ

ಉಪದೇಶದಿಂದ ಇವರ ಮುಂದಿನವರು ಕಣ್ವಾಯನ ಬ್ರಾಹ್ಮಣರು. ಎಂದು ಮತ್ಸ್ಯಪುರಾಣದಲ್ಲಿ ವದರುತ್ತದೆ. ಅಜಮೀಟಪತ್ನಿ ೩ನೆ ನಿಲಿನಿ ವಂಶಾವಳಿ.

ನಿಲಿನೀಯಲ್ಲಿ ಅಜಮಿಟಿ ರಾಜರಿಂದ ನಂಬ್ರ ೨೯ನೆ ನೀಲರೋಹಿತ ಇವರಿಂದ ನಂಬ್ರ ೩೦ನೆ ಸುತಂತು. ನಂಬ್ರ ೩೧ನೆ ಪುರಜಾನು. ೩೨ನೆಪೃಥು ೩೩ ಭದ್ರಾಶ್ವ. ಇವರಿಂದ ನಂಬ್ರ ೩೪ನೆ ಮುದ್ಗಲ. ಕೂಡಾ ೫ ಜನ ಮಕ್ಕಳು. ಪೈಕಿ ೧ನೆಯವರಿಂದ ನಂಬ್ರ ೩೬ನೆ ಬ್ರಹ್ಮನಿಷ್ಟ. ನಂಬ್ರ ೩೭ನೆ ಇಂದ್ರಸೇನ. ನಂಬ್ರ ೩೮ನೆ ವಿಂಧ್ಯಾಶ್ವ. ಇವರಿಂದ ನಂಬ್ರ ೩೯ ಮೃತ್ರಾಯಣ. ದಿವೋದಾಸ ಕೂಡಾ ೨ ಮಕ್ಕಳು. ಈ ದಿವೋದಾಸರಿಂದ ನಂಬ್ರ ೪೦ ಮೈತ್ರೇಯು. ನಂಬ್ರ ೪೧ ಚ್ಯೈದ್ಯವರ. ನಂಬ್ರ ೪೨ ನೆಸುದಾಂಶು. ೪೩ ಸೋಮಕ. ೪೪ನೆ ಚಂದ್ರರಾಜ. ಇವರಿಗೆ ನಂಬ್ರ ೪೫ ದಕ್ಷ ಕೂಡಾ ೧೦೦ ಮಕ್ಕಳು. ಪೈಕಿ ೧ನೆ ದಕ್ಷರಾಜರಿಗೆ ೪೬ನೆ ಸಂವರಣಚಕ್ರವರ್ತಿ. ಇವರಿಂದ ೪೭ನೆ ಕುರುರಾಜರು. ಇವರಿಗೆ ಸುಧನ್ವಾ, ಪರೀಕ್ಷಿಷ, ಪ್ರಜನ, ಜನ್ಹು, ಕೂಡಾ ೪ ಜನ ಮಕ್ಕಳು. ಪೈಕಿ ೧ನೆ ಸುಧನ್ವರಾಜರಿಗೆ ನಂಬ್ರ ೪೮ನೆ ದಾಯದ. ನಂಬ್ರ ೪೯ ಚ್ಯವನ. ೫೦ನೆ ಕ್ರಮಿಥಾರಾಜ. ೫೧ನೆ ಮಸುಮತಿರಾಜ. ಇವರಿಗೆ ೫೨ನೆ ಬೃಹದ್ರಥ. ಕೂಡಾ ೬ ಮಕ್ಕಳು. ಪೈಕಿ ೧ ನೆಯವರಿಗೆ ೫೩ನೆ ಕುಶಾಗ್ರ. ೫೪ನೆ ವೃಷಭ. ೫೫ನೆ ಪುಣ್ಯವಾನ್ ೫೬ನೆ ಪುಷ್ಟಾನು. ೫೭ನೆ ಸಧ್ಯದ್ರಿತ. ೫೮ನೆ ಧನುಷ. ೫೯ನೆ ಸರ್ವಗ. ೬೦ನೆ ಸಂಭವೇಶ. ೬೧ನೆ ಬೃಹದ್ರಥ. ಇವರಿಗೆ ಕೌಶಿಕ ಮುನಿಯು ಫಲಮಂತ್ರೋಪದೇಶ ಕೊಟ್ಟದರಲ್ಲಿ ಎರಡು ಭಾರ್ಯೆಯರಿಗೆ ಆ ಫಲ ಹಂಚಿಕೊಟ್ಟದರಿಂದ ದೇಹಾರ್ಧ ಭಾಗಗಳು ಉಭಯರಲ್ಲಿ ಒಂದೊಂದು ಹುಟ್ಟಿದವು. ಅವನು ಬಿಸಾಡಿದಲ್ಲಿ ಜರಾ ಯೆಂಬ ರಕ್ಕಸಿ ಕೂಡಿಸಿದರಿಂದ ನಂಬ್ರ ೬೨ನೆ ಜರಾಸಂಧ. ಇವರಿಗೆ ನಂಬ್ರ ೬೩ನೆ ಸಹದೇವ. ೬೪ನೆ ಸೋಮವೀತ. ೬೫ನೆ ಶ್ರುತಶ್ರವ. ಇವರಿಂದ ಮುಂದಿನ ಸಂತತಿಯವರಿಗೆ ಕೂಡಾ ಮಗಧ ದೇಶಾಧಿಪರು ಎಂತಾಖಿಲಪುರಾಣ ವದರುತ್ತದೆ.

ಹಿಂದಿನ ನಂಬ್ರ ೪೭ನೆ ಕುರುರಾಜರಿಗೆ ೪ನೆ ಪುತ್ರಿ ಜಿನ್ಹುವಿನಲ್ಲಿ ೬೬ನೆ ಸುರಥರಾಜರು. ಇವರಿಗೆ ನಂಬ್ರ ೬೭ನೆ ವಿದೂರಥ. ೬೮ ಭೌಲು

ಮ. ೬೯ನೆ ಜಯುಸೇನ. ೭೦ನೆ ರುಚಿರ. ೭೧ನೆ ಭೀಮ. ನಂಬ್ರ ೭೨ನೆ
ತ್ವರಿತಾಯು. ೭೩ನೆ ಅಗ್ರೋಧ. ೭೪ನೆ ದೇವತಿಥಿ. ೭೫ನೆ ದಕ್ಷಕ. ೭೬ನೆ
ಭೀಮಸೈನ್ಯ. ಇವರಿಂದ ೭೭ನೆ ದಿಲೀಪ. ೭೮ ಪ್ರದೀಪರಾಜರು. ಇವರಿಗೆ
ನಂಬ್ರ ೭೯ ದೇವಾಪಿ. ಶಾಂತನು ಬಾಹ್ಲಿಕ ಕೂಡಾ ೩ ಜನರು.
ಪೈಕಿ ೨ನೆ ಶಾಂತನುರಾಜರಿಗೆ ಕಾಲಿ, ಗಂಗಾ, ೨ ಪತ್ನಿಯರು. ೧ನೇ
ಪತ್ನಿ ಕಾಳಿಯಿಂದ ನಂಬ್ರ ೮೦ ಚಿತ್ರವೀರ್ಯ. ವಿಚಿತ್ರವೀರ್ಯ. ೨ನೆಪತ್ನಿ
ಗಂಗಾದೇವಿಯಿಂದ ನಂಬ್ರ ೮೧ನೆ ಬೀಷ್ಮ. ಚಿತ್ರವೀರ್ಯರ ಪತ್ನಿ ಅಂಬಿಕೆ
ಯಿಂದ ನಂಬ್ರ ೮೨ನೆ ಧೃತರಾಷ್ಟ್ರ ಇವರಿಂದ ನಂಬ್ರ ೮೩ನೆ ದುರ್ಯೋ
ಧನ. ಕೂಡಾ ೧೦೦ ಗಂಡು ಮಕ್ಕಳು. ದುಶ್ಶಲೆ ಎಂಬ ಹೆಣ್ಣು ಒಂದು.
೧ನೆ ದುರ್ಯೋಧನ ಇವರಿಗೆ ಭಾನುಮತಿ ಎಂಬ ಸ್ತ್ರೀ ಯಿವರಿಂದ ಲಕ್ಷ
ಣಾದಿಗಳು. ವಿಚಿತ್ರವೀರ್ಯರ ಪತ್ನಿ ಅಂಬಾಲಿಕೆಯಿಂದ ನಂಬ್ರ ೮೪ನೆ
ಪಾಂಡುರಾಜ. ಕುಂತಿ ಮಾದ್ರಿಸ್ತ್ರೀಯರು. ೧ನೆಸ್ತ್ರೀಯಿಂದ ೮೫ ಧರ್ಮ.
೮೬ ಭೀಮ. ೮೭ ಅರ್ಜುನ. ೨ನೆ ಮಾದ್ರಿಯಿಂದ ನಂಬ್ರ ೮೮ನೆ ನಕುಲ.
೮೯ನೆ ಸಹದೇವ. ಕೂಡಾ ಪಾಂಡವರು. ಧರ್ಮರಾಯರ ಪತ್ನಿ ದೇವಕಿ.
ಭೀಮಗೆ ಕಾಲಿ. ಅರ್ಜುನಗೆ ಸುಭದ್ರೆ. ನಕುಲಗೆ ಮಾಲಿನಿ. ಸಹದೇವಗೆ
ರೇಣುಮತಿ. ಈ ೫ ಜನ ಸ್ತ್ರೀಯರು. ಇವರಲ್ಲಿ ದೇವಕಿಗೆ ೯೦ನೆ ಯುಧೆ
ಯು. ೨ನೆ ಕಾಲಿಗೆ ೯೧ ಬಭ್ರುಬಾಹು. ೩ನೆ ಸುಭದ್ರೆಗೆ ನಂಬ್ರ ೯೨ನೆ
ಅಭಿಮನ್ಯು. ೪ನೆ ಮಾಲಿನಿಗೆ ೯೩ನೆ ಸುಹೋತ್ರ. ೫ನೆ ರೇಣುಮತಿಗೆ
ನಂಬ್ರ ೯೪ನೆ ನೀರಮಿತ್ರ. ಕೂಡಾ ೫ ಜನರು ಪಂಚಪಾಂಡವರು. ಐದು
ಜನರ ಪತ್ನಿ ದ್ರೌಪದಿ. ಈ ಪುಣ್ಯಸ್ತ್ರೀಗೆ ೫ ಜನರಿಂದ ಪುತ್ರರು. ೯೫ನೆ ಪ್ರತಿ
ವಿಂದ್ಯ. ೯೬ನೆ ಶ್ರುತಸೇನ. ೯೭ನೆ ಶ್ರುತಕೀರ್ತಿ. ೯೮ನೆ ಶ್ರುತಕರ್ಮ.
೯೯ನೆ ಶ್ರುತಾಗ್ನಿ ಕೂಡಾ ದ್ರೌಪದಿಯ ಪಂಚಪುತ್ರರು. ನಂಬ್ರ ೮೦ನೆ
ಚಿತ್ರವೀರ್ಯ ವಿಚಿತ್ರವೀರ್ಯರ ಕಾಲದ ದಾಸಿಯಿಂದಲೆ ನಂಬ್ರ ೧೦೦ನೆ
ವಿದುರಇವರೆಲ್ಲ ಚಿತ್ರವೀರ್ಯ ವಿಚಿತ್ರವೀರ್ಯರ ಮಕ್ಕಳೆಂದರು. ಸಾರಾಂಶ
ತಪೋಧನರಾದ ವ್ಯಾಸರಿಂದ ಮಂತ್ರೋಪದೇಶದಿಂದ ೩ ಜನರು ಹುಟ್ಟಿದ
ವರು. ಹಿಂದೆ ನಂಬ್ರ ೮೨ನೆ ಅರ್ಜುನನಿಂದ ೧೦೧ ಅಭಿಮನ್ಯು. ಇವರಿಂದ

ನಂಬ್ರ ೧೨೨ ಪರೀಕ್ಷಿತ. ನಂಬ್ರ ೧೨೩ ಜನಮೇಜಯ. ಇವರಿಂದ ಮುಂದೆ ಕಲಿಯುಗದಲ್ಲಿ ಶತಾನಿಕ, ಸೋಮಕೃಷ್ಣ, ವಿವಿಕ್ಷು, ಭುರಿ, ಚಿತ್ರರಥ, ಶುಚಿಶ್ರವ, ವೃಷ್ಟಿಮಾನ್, ಸುಶೀಣ, ಸುನೀತ, ಸುಭಕ್ಷು, ಸುಖೀಬಲ, ರಾಜಪರಿಷಣ, ಸುಪೀತ, ಮೇದಾವೀ, ಸರಜಯ, ಉರ್ವಗ, ತಿಗ್ಮಾತ್ಮ, ಬೃಹದ್ರಥ, ವಸು, ಶತಾನಿಕ, ದ್ವಯನ, ಹವೀನರ, ದಂಡಪಾಣಿ, ನಿರಮಿತ್ರ, ಕ್ಷೇಮಕ, ಕೂಡಾ ೨೫ ತಲಾಂತದ ಅರಸರು. ಎಂತ ಮತ್ಸ್ಯ ಪುರಾಣದ ಪ್ರಶಂಸೆ ಆಗಿರುತ್ತದೆ.

ಅಷ್ಟವಸುಗಳ ವಿವರ— ಪೂರ್ವದಲ್ಲಿ ಬ್ರಹ್ಮದೇವರ ಸಭೆಯಲ್ಲಿ ಎಲ್ಲರೂ ನೆರೆದಿರುವ ಸಮಯ ಒಬ್ಬಾನೊಬ್ಬ ಅರಸನು ದೇವಸಭೆಯಲ್ಲಿ ಕುಳ್ಳಿರುತ್ತಿರಲು ಗಂಗಾದೇವಿಯು ಆ ಸಭೆಗೆ ಒರುತ್ತಿರಲು ಗಾಳಿಯಿಂದ ಆಕೆಯ ಶೀರೆನೆರಿ ಹಾರಿಕೊಂಡಿದ್ದರಿಂದ ಸುರರೆಲ್ಲ ಕಣ್ಣುಮುಚ್ಚಿ ಕುಳ್ಳಿರಲು, ವಾಯುದೇವರು ಮಾತ್ರ ನೋಡುತಿದ್ದದ್ದನ್ನು ಬ್ರಹ್ಮದೇವರು ತಿಳಿದು ವಾಯುವಿಗೆ ಭೂಲೋಕದಲ್ಲಿ ಮನುಷ್ಯಯೋನಿಯಲ್ಲಿ ಹುಟ್ಟೆಂದೂ, ಮತ್ತು ನೀನು ಕೆಲವುಕಾಲ ಮನುಷ್ಯರೊಡನೆ ಅನುಭವಿಸುತ್ತಿರು ಎಂದು ಗಂಗೆಗೂ ಶಾಪವಿತ್ತರು. ಆ ಪ್ರಕಾರ ವಾಯುವೇ ಆ ಶಂತನು ಆಗಿ ಹುಟ್ಟಿದರು. ಅಷ್ಟವಸುಗಳು ೧ನೆ ಆಪ, ಧ್ರುವ, ಸೋಮ, ಅನಿಲ, ಆನಲ, ಪ್ರತ್ಯೂಷ, ಪ್ರಭಸ, ಧರವನ ಈ ೮ ಜನರು ವಶಿಷ್ಟಾಶ್ರಮಕ್ಕೆ ಬರುತ್ತಿರಲು ಅಲ್ಲಿ ಒಂದು ಕಾಮಧೇನುವನ್ನು ಕಂಡು ಈ ಗೋವು ೮ನೆ ವಸುವು ತನ್ನ ಪತ್ನಿಗೆ ಬೇಕೆಂದು ಅದನ್ನು ಹಿಂಬಾಲಿಸಿ ಓಡಿಸುತ್ತಿರಲು ಆ ಗೋವು ಮುಳ್ಳು ಗೊಂಜೆಯಲ್ಲಿ ಸಿಕ್ಕಿಕೊಂಡಾಗ್ಯೂ ೮ನೇಯವನು ಓಡಿಸುತ್ತಿರುವುದನ್ನು ವಸಿಷ್ಟಮುನಿಗಳು ನೋಡಿ ನೀವೆಲ್ಲ ಮನುಷ್ಯ ಯೋನಿಯಲ್ಲಿ ಹುಟ್ಟಿರೆಂದು ಶಾಪಿಸಿದಕ್ಕೆ ಭೂಲೋಕದಲ್ಲಿ ಇರಲಾರೆವು. ಉಶಾಪಕೊಡಬೇಕಾಗಿ ಬೇಡಿಕೊಂಡರು. ಆಗ್ಯೆ ನೀವು ೭ ಜನರು ಹುಟ್ಟಿದಾಗಲೆ ಮೃತರಾಗುವಿರಿ. ಆ ಮುಳ್ಳಿನಲ್ಲಿ ಹೊಡೆದ ೮ನೆಯವನು ಮಾತ್ರ ಬಹು ಕಾಲ ಬದುಕಿಕೊಂಡು ಅವಸಾನ ಕಾಲದಲ್ಲಿ ಸರಳ ಮಂಚದಲ್ಲಿ ಮಲಗಿ ಮರಣ ಪಡಿಯಲೆಂದು ಆ ಋಷಿಗಳು ಶಾಪಿಸಿದ ಪ್ರಕಾರ ಇವರೆಲ್ಲರು ಭೂತಳಕ್ಕೆ ಬರುತಿರಲು ಸತ್ಯಲೋ

ಕದಿಂದ ಶಾಪಗ್ರಸ್ತಳಾಗಿ ಗಂಗೆ ಬರುತ್ತಿರುವುದನ್ನು ನೋಡಿ ಮಾತೆಯ ಪಯಣ ವೃತ್ತಾಂತವಂ ತಿಳಿಯ ಮನುಷ್ಯರನ್ನು ಮದುವೆ ಮಾಡಿಕೊಳ್ಳುವೆ ನೆನಲಾಗಿ ನಾವು ವಸುಗಳು ನಿಮ್ಮ ಬಸುರಿನಲ್ಲಿ ಜನಿಸುವೆವು. ಹುಟ್ಟಿದ ಕೂಡಲೆ ನಮ್ಮನ್ನು ಕೊಲ್ಲಬೇಕೆಂಬ ವಸುಗಳ ವಾಕ್ಯವನ್ನು ಕೈಕೊಂಡಳು. ಆ ರೀತಿ ಗಂಗಾದೇವಿ ಶಂತನುರಾಜರ ಪತ್ನಿಆಗಿದ್ದು ೭ ಮಂದಿಯನ್ನು ಹುಟ್ಟಿದ ಕೂಡಲೆ ಕಾರಣಾನುರೂಪದಿಂದ ಕೊಂದ ನಂತರ ೮ನೆ ವಸು ಹುಟ್ಟಿ ಜೀವಿಸಿಕೊಂಡವನೇ ಭೀಷ್ಮ ಎಂದು ಮಹಭಾರತದಲ್ಲಿ ಪ್ರಸ್ತಾಪಿಸಿರುತ್ತದೆ.

ಯದುವಂಶಾವಳಿಯಲ್ಲಿ ಕಾಣುವ ನಂಬ್ರ ೨೪ನೆ ರುಕ್ಮಕವಚರಾಜರ ವಂಶದಲ್ಲಿ ಹುಟ್ಟಿದ ರಾಜಕುಮಾರರನ್ನು ಈ ವಂಶಾವಳಿಯ ನಂಬ್ರ ೩೪ನೆ ಮುದ್ಗಲರಾಜರ ಅನುಜ ಜಯರಾಜರು ಸಾಕಣೆಗೆ ಕೊಂಡು ಆ ಸಾಕಣೆಯವರ ವಂಶದಲ್ಲಿ ದ್ರುಪದರಾಯ ಕೂಡಾ ೩ ಜನ ಹುಟ್ಟಿದ್ದು ಈ ವಂಶ ವಿವರಣೆ ಇಲ್ಲಿಗೆ ನಿಲಿಸಿಯದೆ. ಬುದ್ಧಿಶಾಲಿಗಳು ಸುಧಾರಿಸಲಿ.

**ಮುಂಡಾಜೆ ಅನಂತಭಟ್ಟ, ಗೋರೆ.**

# ಚಂದ್ರವಂಶಾವಳಿಯು

## ಸಂಪೂರ್ಣವು.

॥ ಶ್ರೀಕೃಷ್ಣಾರ್ಪಣಮಸ್ತು ॥

# ಸೂರ್ಯ ವಂಶಾವಳಿ.

ನಂಬ್ರ ೧ನೆ ಆದಿನಾರಾಯಣ. ಇವರಿಂದ ನಂಬ್ರ ೨ನೆ ಬ್ರಹ್ಮದೇವರು. ಇವರ ಮಾನಸ ಪುತ್ರರು ಮರೀಚಿ, ಅತ್ರಿ, ಅಂಗಿರಾ, ಪೌಲುಲಸ್ಯ, ಪುಲಹ, ಕೃತು, ಪ್ರಚೇತ, ವಸಿಷ್ಠ, ಭೃಗು, ನಾರದ, ಕೂಡಾ ೧೦ ಜನರು. ೧ನೆ ಮರೀಚಿಯಿಂದ ನಂಬ್ರ ೧೩ನೆ ಕಾಶ್ಯಪ. ನಂಬ್ರ ೧೪ ಸೂರ್ಯ. ನಂಬ್ರ ೧೫ ಮನು. ಇವರಿಂದ ನಂಬ್ರ ೧೬ನೆ ಇಲಾ, ಇಕ್ಷ್ವಾಕು, ಕುಶನಾಭಿ, ಅರಿಷ್ಟ, ದೃಷ್ಟ, ನರೀಶ್ಯತ, ಕುರುಶ, ಶರ್ಯಾತಿ, ಪ್ರವಿಧ, ನಾಭಿ ಕೂಡಾ ೧೦ ಜನರು. ಈ ಪೈಕಿ ೨ನೆ ಇಕ್ಷ್ವಾಕುಯಿಂದ ನಂಬ್ರ ೧೭ನೆ ವಿಕುಕ್ಷಿ, ಕುಕ್ಷರದ, ಕೂಡಾ ೨ಜನರು. ಪೈಕಿ ೨ನೆಯುವರಿಂದ ನಂಬ್ರ ೧೮ನೆ ಭಾನುರಾಜ. ಇವರಿಂದ ನಂಬ್ರ ೧೯ನೆ ಬಾಣರಾಜ. ಇವರಿಂದ ನಂಬ್ರ ೨೦ನೆ ಉತ್ತಾನಪಾದ. ಇವರಿಗೆ ಸುನೀತಿ, ಸುರುಚಿ ಕೂಡಾ ೨ ಪತ್ನಿಯರು. ೧ನೆಯುವಳಲ್ಲಿ ನಂಬ್ರ ೨೧ನೆ ಧ್ರುವ. ೨ನೆಯವಳಲ್ಲಿ ನಂಬ್ರ ೨೨ನೆ ಉತ್ತಮಸೇನ. ನಂಬ್ರ ೧೭ನೆ ವಿಕುಕ್ಷಿಯಿಂದ ನಂಬ್ರ ೨೩ನೆ ಕುಕುತ್ಸ. ನಂಬ್ರ ೨೪ನೆ ಸುಯೋಧನ. ೨೫ನೆ ದ್ರುದುರಾಜ. ನಂಬ್ರ ೨೬ನೆ ವಿಶ್ವಗ. ೨೭ನೆ ಯಿಂದು. ೨೮ನೆ ಯುವನಾಶ್ವ. ೨೯ನೆ ಶಬಸ್ತ. ೩೦ನೆ ವತ್ಸ. ೩೧ನೆ ಬೃಹದಾಶ್ವ, ನಂಬ್ರ ೩೨ನೆ ಕುವಲಾಶ್ವ. ೩೩ನೆ ಧೃಢಾಶ್ವ. ೩೪ ಪ್ರಮೋದ. ೩೫ ಹರ್ಯಶ್ವ. ೩೬ ನಿಕುಂಭ. ೩೭ ಸಂಹಿತಾಶ್ವ. ಇವರಿಂದ ಅಕೃತಾಶ್ವ. ೩೮ನೆ ರಣಾಶ್ವ ಕೂಡಾ ೨ ಜನರು. ೨ನೆಯವರಿಂದ ೩೯ನೆ ಯವನಾಶ್ವ. ೪೦ನೆ ಮಾಂಧಾತಾ. ಇವರಿಗೆ ೪೧ ಪುರುಕುತ್ಸ, ಧರ್ಮಸೇನ, ಮುಚುಕುಂದ ಕೂಡಾ ೩ ಜನರು. ೧ನೆಯುವರಿಗೆ ೪೨ನೆ ವಸು. ೪೩ನೆ ಸಂಭೂತಿ. ೪೪ನೆ ತ್ರಿಧನ್ವಾ. ೪೫ನೆ ತ್ರಿಯಾರುಣ. ೪೬ನೆ ಸತ್ಯವ್ರತ. ೪೭ನೆ ಹರಿಶ್ಚಂದ್ರ. ೪೮ನೆ ರೋಹಿತ. ೪೯ನೆ ವೃಕರಾಜ. ೫೦ನೆ ಬಾಹುರಾಜ. ೫೧ನೆ ಸಗರರಾಜ. ಇವರಿಗೆ ೧ನೆ ಪ್ರಭಾವತಿ. ೨ನೆ ಭಾನುಮತಿಸ್ತ್ರೀಯರು. ೧ನೆ ಸ್ತ್ರೀಯಿಂದ ೬೦ ಸಾವಿರ ಗಂಡುಮಕ್ಕಳು. ೨ನೆಯುವಳಿಂದ ೫೨ನೆ ಅಸಮಂಜ. ಇವರಿಂದ ೫೩ನೆ ಅಂಶುಮತಿ. ೫೪ನೆ ದಿಲೀಪ.

೫೫ನೆ ಭಗಿರಥ. ೫೬ನೆ ನಾಭಿಗ. ೫೭ನೆ ಅಂಬರೀಷ. ೫೮ನೆ ಸಿಂಧು. ೫೯ನೆ ಅಯುತಾಯು. ೬೦ನೆ ಋತುಪರ್ಣ. ೬೧ ಕಲ್ಮಷಪಾದ. ೬೨ ಸರ್ವಕರ್ಮ ೬೩ ಲನರಣ್ಯ. ೬೪ನೆ ನಿಘ್ನರಾಜ. ಇವರಿಗೆ ನಂಬ್ರ ೬೫ನೆ ಅನಮಿತ್ರ. ರಘು ಈ ೨ ಜನರು. ಇವರಿಂದ ರಘುವಂಶವಾಯಿತು. ಈ ರಘುರಾಜರಿಂದ ೬೬ನೆ ದಿಲೀಪ. ಇವರಿಂದ ನಂಬ್ರ ೬೭ನೆ ಅಜಪಾಲ. ೬೮ನೆ ದೀರ್ಘಬಾಹು. ೬೯ನೆ ಅಜಪಾಲಕರಾಜರು. ಇವರಿಂದ ೭೦ನೆ ದಶರಥರಾಜ. ಇವರಿಗೆ ಕೈಕೆ, ಕೌಸಲ್ಯೆ, ಸೌಮಿತ್ರೆ ಈ ಮೂವರು ಪತ್ನಿಯರು. ಇವರಿಂದ ರಾಮ, ಲಕ್ಷ್ಮಣ, ಭರತ, ಶತ್ರುಘ್ನ ಕೂಡಾ ೪ಜನ ಮಕ್ಕಳು. ರಾಮಪತ್ನಿ ಸೀತೆಯಿಂದ ಲವಕುಶರು. ಇಲ್ಲಿಗೆ ನಂಬ್ರ ೭೬ ರಾಮರಿಂದ ೨ನೆ ಕುಶನಿಂದ ನಂಬ್ರ ೭೭ನೆ ಅತಿಥಿ. ೭೮ನೆ ನಿಷದ. ೭೯ನೆ ನಾಭಗ. ೮೦ನೆ ಪುಂಡರೀಕ. ೮೧ನೆ ಕ್ಷೇಮಧನ್ವಾ. ೮೨ನೆ ದೇವಾನಿಕ. ೮೩ಅ ಹೇನನು. ೮೪ ಸಹಸ್ರಾಶ್ವ. ೮೫ ಚಂದ್ರವಲ್ಲೋಕ. ೮೬ ತಾರಾಪೀಡಾ. ೮೭ ನಲ. ೮೮ ಚಂದ್ರಗಿರಿ. ೮೯ ಭಾನುಚಂದ್ರ. ೯೦ ಚಂದ್ರ ೯೧ ಶೃತಾಯು. ಕೂಡಾ ಕುಶನ ಸಂತತಿ ತಲಾಂತರಗಳು. ೧೫ ಈ ಶೃತಾಯು ರಾಜರಿಗೆ ಭಾರತಯುದ್ಧದಲ್ಲಿ ಮರಣ ಎಂತ ಖಿಳಪುರಾಣದಲ್ಲಿ ತೋರುವದು. ಮೇಲಿನ ನಂಬ್ರ ೩೭ನೆ ಸಂಹಿತಾಶ್ವರಾಜರು ಪಡದ ೧ನೆ ಮಗ ಅಕ್ರೃತಾಶ್ವರಿಂದ ಅನೇಕ ತಲಾಂತರಗಳು ಪ್ರಾಚೀನದಲ್ಲಿ ಇರುತ್ತಿತ್ತೆಂದು ಮತ್ಸ್ಯ ಪುರಾಣದಲ್ಲಿ ಹೇಳುವದಲ್ಲದೆ ಭಾರತ ಖಿಲದಲ್ಲಿ ವ್ಯಾಸರುಕೂಡಾ ಅನೇಕ ಅರಸರ ಪ್ರಶಂಸೆ ಕೊಟ್ಟಿರುವರು. ಮತ್ತು ಮೇಲಿನ ನಂಬ್ರ ೪೧ನೆ ಮರುಕುತ್ಸ ಧರ್ಮಸೇನ ಕೂಡಾ ೩ ಜನರಲ್ಲಿ ೨ನೆ ಧರ್ಮಸೇನನ ವಂಶಸ್ಥ ರಾಜರು. ಮಿಥಿಲಾನಗರದ ಅರಸರೆಂತ ತೋರುತ್ತದೆ. ಬಲಿರ್ಧವಾಗುತ್ತದೆ.

ಮೇಲಿನ ನಂಬ್ರ ೨೦ನೆ ಉತ್ತಾನಪಾದ ರಾಜರು ಮತ್ತು ಪ್ರಿಯವ್ರತರಾಜರು. ಈ ಪೈಕಿ ಪ್ರಿಯವೃತರಾಜರ ವಂಶ ವಿವರಣೆ. ಇವರಿಗೆ ೧ನೆ ಪತ್ನಿಯಿಂಡ ೭ ಜನ ಮಕ್ಕಳು. ಮತ್ತು ಪ್ರಿಯವೃತ ಇವರಿಗೆ ಸಂಜ್ಞಾಂದ ಮನು ರೈವತ ಹ್ವಯ ಕೂಡಾ ೧೦ ಜನರಲ್ಲಿ ೩ ಜನರು ಮನುಗಳಾದರು. ೧ನೆ ಸಂಜ್ಞಾಂದ ಎಂಬವರಿಗೆ ೩ ನಾಭಿ ಕೂಡಾ ೯ ಜನರು. ಇವರಿಗೆ ೪ನೆ

ವೃಷಭರಾಜ, ಇವರಿಗೆ ಭರದ್ವತಾಖ್ಯ, ಸುದರ್ಶನ, ಕೂಡಾ ೫ ಜನರು. ೪ನೆ ವೃಷಭರಾಜರಿಗೆ ೫ ನೆ ಸುಮತಿ ೬ ವೃಷಸೇನ ೭ ದೇವಪಾದಿ. ೮ ಸೂರ್ಯ. ೯ನೆ ವೇದದ್ಯುಮ್ನ ಇವರೀಗೆ ರೇಣುಮತೀ ಸ್ತ್ರೀಯಲ್ಲಿ ೧೦ನೆ ಪರಮೇಷ್ಠಿ. ೧೧ ಪ್ರತಿಹಕ. ೧೨ನೆ ತಾಪಾಶ್ಯ. ೧೩ನೆ ಪ್ರಸ್ತುಕ. ೧೪ನೆ ಹೃದಯಜನು. ೧೫ನೆ ಪ್ರತಿಶೇಣ. ೧೬ನೆ ಅತರ್ಕ. ಇವರಿಗೆ ೧೭ ಮನು. ೧೮ ಬಿಂದು. ವರುತ ಕೂಡಾ ೨ ಗಂಡು ಮಕ್ಕಳು. ಪ್ಯಕಿ ೨ನೆಯವರಿಗೆ ೧೯ನೆ ವೀರವೃತಾದ್ವಯ. ೨೦ನೆ ಮನ್ಯು ೨೧ನೆ ಭವನತ. ೨೨ನೆ ತತ್ವ ಸುಖ್ಯ. ಇವರಿಗೆ ೨೩ನೆ ವಿರಾಜಾಖ್ಯ. ಹೃದ್ಯದಾನ ಕೂಡಾ ೨ ಜನರು. ಪ್ಯಕಿ ೨ನೆಯವರಿಗೆ ೧೦೦ ಜನ ಗಂಡುಮಕ್ಕಳೆಂತ ಭಾಗವತದಲ್ಲಿ ಹೇಳುವ ಈ ವಂಶಸ್ಥರೆಲ್ಲ ಭಾಗವತ ಮೌಳಿಗಳಾಗಿರುವರೆಂದು ಈ ಮಹಾ ಭಾಗ ವತ ಗ್ರಂಥೋಕ್ತಿಯಾಗಿರುತ್ತದೆ.

☞ ಇದರಲ್ಲಿ ನಂಬ್ರ......ನೆ.........ರಿಂದ ಎಂಬುದು ಪ್ರತಿ ಹೆಸರಿನಲ್ಲಿ ಕೂಡಿಸಿಕೊಳ್ಳಬೇಕು.

## ಸೂರ್ಯವಂಶಾವಳಿಯು

## ಸಂಪೂರ್ಣವು.

॥ ಶ್ರೀಕೃಷ್ಣಾರ್ಪಣಮಸ್ತು ॥

ಈ ಪುಸ್ತಕವು ಮುಂಡಾಜೆ ಅನಂತಭಟ್ಟ, ಗೋರೆ ಇವರಿಂದ ಸಂಗ್ರಹಿಸಲ್ಪಟ್ಟು, ಹಾವಂಜೆ ಗುರುರಾವ್ ಇವರ ಉಡುಪಿ ಶ್ರೀಕೃಷ್ಣಮುದ್ರಣಾಲಯದಲ್ಲಿ ಮುದ್ರಿಸಲ್ಪಟ್ಟು, ಸ್ವಕೀಯ ಉಡುಪಿ 'ಶ್ರೀಮನ್ಮಧ್ವಸಿದ್ಧಾಂತಗ್ರಂಥಾಲಯ'ದಿಂದ ಪ್ರಕಟಿಸಲ್ಪಟ್ಟಿತು. ಗತ ಶಾ। ಶಕ ೧೮೫೧. ಇಸವಿ 1929.

# ಕನ್ನಡಲಿಪಿಯ ಯಕ್ಷಗಾನ ಪ್ರಸಂಗಗಳು.

| | | | |
|---|---|---|---|
| ತುಳುಕಿಟ್ಣರಾಜಿಪರ್ಸಂಗೊ | 0 | 8 | 0 |
| ಸಭಾಲಕ್ಷಣಪ್ರಸಂಗಪೀಠಿಕೆ | 0 | 6 | 0 |
| ನಳಚರಿತ್ರೆ (ದಮಯಂತೀಕಲ್ಯಾಣ) | 0 | 6 | 0 |
| ದ್ರೌಪದೀಪ್ರತಾಪ | 0 | 6 | 0 |
| ವಿಶ್ವಾಮಿತ್ರಪ್ರತಾಪ | 0 | 6 | 0 |
| ಕೃಷ್ಣಾರ್ಜುನರಕಾಳಗ | 0 | 6 | 0 |
| ಶಂಬರಾಸುರನಕಾಳಗ | 0 | 5 | 0 |
| ಕಾಲನೇಮಿಕಾಳಗ | 0 | 5 | 0 |
| ರಾಮರಾಜ್ಯವಿಯೋಗ (ಪಟ್ಟಾಭಿಷೇಕ) | 0 | 5 | 0 |
| ಕನಕಾಂಗಿಕಲ್ಯಾಣ | 0 | 5 | 0 |
| ಶ್ರೀಕೃಷ್ಣದಿನಾಶ್ವಮೇಧ | 0 | 5 | 0 |
| ಗದಾಪರ್ವ | 0 | 5 | 0 |
| ಮಾರ್ಕಂಡೇಯಚರಿತ್ರೆ | 0 | 4 | 0 |
| ಚೂಡಾಮಣಿ (ಸುಂದರಕಾಂಡ) | 0 | 4 | 0 |
| ಮೀನಾಕ್ಷಿಕಲ್ಯಾಣ | 0 | 4 | 0 |
| ಸಮುದ್ರಮಥನ | 0 | 4 | 0 |
| ಐರಾವತ | 0 | 4 | 0 |
| ಹರಿಶ್ಚಂದ್ರಚರಿತ್ರೆ | 0 | 4 | 0 |
| ಸುಧನ್ವಕಾಳಗ | 0 | 4 | 0 |
| ಪಂಚವಟಿವಾಲಿಸುಗ್ರೀವರಕಾಳಗ | 0 | 4 | 0 |
| ಜರಾಸಂಧವಧೆ | 0 | 3 | 0 |
| ಹಿರಣ್ಯಾಕ್ಷವಧೆ | 0 | 3 | 0 |
| ರತಿಕಲ್ಯಾಣ | 0 | 3 | 0 |
| ಇಂದ್ರಜಿತುಕಾಳಗ | 0 | 2 | 0 |

**ಪಾವಂಜೆಗುರುರಾವ್,**

ಶ್ರೀಮನ್ಮಧ್ವಸಿದ್ಧಾಂತಗ್ರಂಥಾಲಯ, ಉಡುಪಿ.